**<u>ಅಸಲು ದಾವಾ ಸಂಖ್ಯೆ- 237/2012</u>** **<u>ಪಿ.ಡಬ್ಲ್ಯೂ:-</u> 1**

ದಿನಾಂಕಃ **11-12-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು:- 3 ನೇ ಪ್ರತಿವಾದಿ ಪರ ವಕೀಲರಿಂದ:-</u>**

ಸಾಕ್ಷಿಗೆ ನಿಪಿ-24 ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಯಾವ ದಾಖಲೆ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಆಸ್ತಿಯು ನನ್ನ ಮಾವರಿಂದ ನನ್ನ ಅತ್ತೆಯ ಹೆಸರಿಗೆ ವರ್ಗಾವಣೆಯಾದ ದಾಖಲೆ ಎಂದು ನುಡಿಯುತ್ತಾರೆ. ನನ್ನ ಮಾವ 2007 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನಿಪಿ-24 ದಾಖಲೆಯನ್ನು ನಾನು 2011 ನೇ ಸಾಲಿನಲ್ಲಿ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿಪಿ-22 ಮತ್ತು 23 ದಾಖಲೆಗಳು ಖಾತೆ ಬದಲಾವಣೆ ದಾಖಲೆಗಳಾಗಿರುತ್ತವೆ.ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ನಿಪಿ-22 ರಿಂದ 24 ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-22 ಮತ್ತು 23 ನೇ ದಾಖಲೆಯಲ್ಲಿ ಷರಾ “DCBCR No.231/2009-10 ರ ರೀತ್ಯಾ ಮುಖ್ಯ ಅಧಿಕಾರಿಗಳ ಆದೇಶ ದಿಃ 28-03-2011 ಹಾಗೂ ಮರಣ ದಾಖಲೆ ಮತ್ತು ವಂಶವೃಕ್ಷ ಹಾಗೂ ರಾ.ನಿ.ಯವರ ವರದಿಯ ಆಧಾರದ ಮೇಲೆ ಅರ್ಜಿದಾರರ ಹೆಸರಿಗೆ ಖಾತೆ ವರ್ಗಾಯಿಸಲು ಸದರಿ ಸ್ವತ್ತಿನ ಮೇಲೆ ಸಿವಿಲ್ ವ್ಯಾಜ್ಯಾಗಳಿಗೆ ಹೊರತುಪಡಿಸಿ ಖಾತೆ ದಾಖಲು ಮಾಡಿದೆ" ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಷರಾದ ಕೆಳ ಭಾಗದಲ್ಲಿ ಸಂಬಂಧಪಟ್ಟ ಅಧಿಕಾರಿಯ ಸಹಿ ನಮೂದಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಸೀಲು ಹಾಕಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-20 ಮತ್ತು 21 ದಾಖಲೆಗಳು ದಾವಾ ಆಸ್ತಿಗಳು ನನ್ನ ಮಾವನ ಹೆಸರಿನಲ್ಲಿ ಖಾತೆ ನಮೂದಾಗಿರುವ ದಾಖಲೆಗಳು. ಸದರಿ ನಿಪಿ-20 ಮತ್ತು 21 ದಾಖಲೆಗಳಲ್ಲಿ ದಾವಾ ಆಸ್ತಿಯು ನನ್ನ ಮಾವನ ಹೆಸರಿಗೆ ಖಾತೆ ಯಾವ ಆಧಾರದ ಮೇಲೆ

ಬಂದಿದೆ ಎಂದು ನಮೂದಾಗಿಲ್ಲ ಎಂದರೆ ಸರಿ. ನಿಪಿ-20 ರಿಂದ 24 ದಾಖಲೆಗಳನ್ನು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪಂಚಾಯಿತಿ ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-20 ರಿಂದ 24 ದಾಖಲೆಗಳನ್ನು ಒಟ್ಟಿಗೆ ಪಡೆದುಕೊಂಡು ಹಾಜರುಪಡಿಸಿದ್ದೇವೆ ಎಂದರೆ ಸರಿ. ನಿಪಿ-25 ಕಂದಾಯ ಪಾವತಿ ದಾಖಲೆಯಾಗಿರುತ್ತದೆ. ನಿಪಿ-25 ದಾಖಲೆಯನ್ನು ಹೊರತುಪಡಿಸಿ ಅದಕ್ಕೂ ಪೂರ್ವದ ಮತ್ತು ನಂತರದ ಕಂದಾಯ ಪಾವತಿ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.